# ಕಾನನ

ಜನವರಿ 2017

ನಿಸರ್ಗದೆಡೆಗೆ ಪಯಣ



BANNERUGHATTA
WILDLIFE CONSERVATION GROUP

# ಕಾನನ

ನಿಸರ್ಗದೆಡೆಗೆ ಪಯಣ



ಜನವರಿ 2017

BANNERUGHATTA

WILDLIFE
CONSERVATION
GROUP



* ಹಿತ್ತಲ ಗಿಡವೂ ಮದ್ದೇ. . .!
* ಗಿಡ-ಮರಗಳನ್ನು ಮುಟ್ಟಿ ಮಾತನಾಡಿಸಿದ್ದೀರಾ?
* ಮಣ್ಣು ಮಸಿ
* ಅಂತರಿಕ್ಷಕೆ (ಕವನ)
* ಪ್ರಕೃತಿ ಬಿಂಬ


**ಲೇಖಕ ವೃಂದ**

ಶಾಂತಮ್ಮ.ಎಸ್

ಧನಂಜಯ ಜೀವಾಳ .ಬಿ .ಕೆ

ಜೈಕುಮಾರ್ .ಆರ್

ಕೃಷ್ಣನಾಯಕ್

ಕಾರ್ತಿಕ್ .ಎ .ಕೆ

**ವಿನ್ಯಾಸ**

ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**

ಕಾರ್ತಿಕ್ .ಎ .ಕೆ

**ಪರಿಷ್ಕರಣೆ**

ಮುರಳಿ .ಎಸ್

ನಾಗೇಶ್ .ಓ .ಎಸ್


© Karthik AK




© ಕಾರ್ತಿಕ್ .ಎ .ಕೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

ನಮ್ಮ ನಾಡಿನಲ್ಲಿ ಇತ್ತೀಚಿಗೆ ಅರಣ್ಯಗಳಿಗೆ ಆಗುತ್ತಿರುವ ಹಾನಿ ಅಗಾಧವಾದದ್ದು. India's State of Forests, 2009 ರ ಪ್ರಕಾರ ಕರ್ನಾಟಕದಲ್ಲಿ ಹೆಚ್ಚು ದಟ್ಟ ಅರಣ್ಯ ಮತ್ತು ಸಾಧಾರಣ ಅರಣ್ಯ ಪ್ರದೇಶಗಳು ಶೇಕಡ 11.44% ರಷ್ಟು ಮಾತ್ರ ಉಳಿದುಕೊಂಡಿದೆ, ಅಂತಹದರಲ್ಲಿ ಅರಣ್ಯಪ್ರದೇಶಗಳು ಮತ್ತು ವನ್ಯಜೀವಿಗಳ ಸರ್ವನಾಶ ನಮಗೆ ನಾಚಿಕೆಯನ್ನುಂಟು ಮಾಡುವಂತಹುದು. ಇಡೀ ವಿಶ್ವವೇ ಜಾಗತಿಕ ತಾಪಮಾನ, ಹವಮಾನ ವೈಪರಿತ್ಯದಿಂದ ತಲ್ಲಣಗೊಂಡು ವಿಶ್ವದ ಹಲವಾರು ದೇಶಗಳು ಈಗಾಗಲೇ ತೊಂದರೆಯ ಹಾದಿ ಹಿಡಿದಿವೆ. ಅಭಿವೃದ್ಧಿ, ನಗರೀಕರಣದ ಹೆಸರಿನಲ್ಲಿ ಮರಗಳ ಮಾರಣಹೋಮವೇ ನಡೆಯುತ್ತಿದೆ.




# ಹಿತ್ತಲ ಗಿಡವೂ ಮದ್ದೇ...!

ಇಡೀ ಮುತ್ತತ್ತಿ ಕಾಡಿಗೆ ಸಸ್ಯಶಾಸ್ತ್ರದಲ್ಲಿ ಪರಿಣಿತನಾದ ನನ್ನ ಅಜ್ಜ ಕಾಡಿನ ಗಿಡಮೂಲಿಕೆಗಳಿಂದ ಯಾವ ರೋಗ ಗುಣವಾಗುತ್ತದೆ ಎಂದು ನೀರು ಕುಡಿದಷ್ಟು ಸರಾಗವಾಗಿ ಹೇಳಬಲ್ಲ. ನಾನು "ನಿನಗೆ ಇಷ್ಟು ಅಗಾಧವಾದ ಜ್ಞಾನ ಹೇಗೆ ಬಂತು ತಾತ" ಎಂದರೆ ಅವರು ಮುಗುಳ್ನಗುತ್ತ "ಇದು ನಮ್ಮ ವಂಶಸ್ಥರು ನನಗೆ ಕೊಟ್ಟ ಬಳುವಳಿ" ಎನ್ನುತ್ತಿದ್ದರು. ಹಿಂದೆ ಆಸ್ಪತ್ರೆಗಳ ಅವಶ್ಯಕತೆ ತುಂಬ ಕಡಿಮೆ! ಕೆಮ್ಮು-ದಮ್ಮು, ಜ್ವರ, ತಲೆ ಸಿಡಿತ, ನೋವು ಮುಂತಾದ ಎಲ್ಲಾ ಕಾಯಿಲೆಗಳಿಗೂ ಮನೆಯ ಮದ್ದೇ ಸಂಜೀವಿನಿಯಾಗಿತ್ತು. ಒಂದು ವೇಳೆ ಆಸ್ಪತ್ರೆಗಳಿಗೆ ಹೋದರು ಕೂಡ ಒಳ್ಳೆಯ ಚಿಕಿತ್ಸೆ ದೊರಕುತ್ತಿತ್ತು. ಈಗಿನಂತೆ ಆಸ್ಪತ್ರೆಗಳು ಬಿಸಿನೆಸ್ ಮಾಡದೆ ಸೇವೆ ಮಾಡುವ ಮನೋಭಾವನೆಯನ್ನು ಹೊಂದಿದ್ದವು.

ನನಗೆ ನನ್ನ ತಂದೆ ಹೇಳಿದ ಒಂದು ಮರೆಯಲಾಗದ ಘಟನೆ ಒಮ್ಮೊಮ್ಮೆ ನೆನಪಿಗೆ ಬರುವುದುಂಟು. ನನ್ನ ಅಪ್ಪನ ತಮ್ಮ, ನನ್ನ ಚಿಕ್ಕಪ್ಪ ಮಗುವಾಗಿದ್ದಾಗ ಒಂದು ಭಯಾನಕ ಕಾಯಿಲೆ ಬಂದು ಬಳಲುತ್ತಿದ್ದರಂತೆ. ನಮ್ಮ ಅಜ್ಜ ಕೊಟ್ಟ ಯಾವ ಔಷಧಗಳು ಫಲಿಸದ ಕಾರಣ ಕಾಸಿಲ್ಲದಿದ್ದರೂ ಅವರಿವರತ್ತಿರ ಬೇಡಿ ಬೆಂಗಳೂರಿನ ದೊಡ್ಡ ಆಸ್ಪತ್ರೆಯಲ್ಲಿ ತೋರಿಸಿದರೂ ಗುಣವಾಗಲಿಲ್ಲವಂತೆ. ಆಗ ಹಣ್ಣಣ್ಣು ಮುದುಕನಾಗಿದ್ದ ನಮ್ಮ ಮುತ್ತಜ್ಜ ತೋರಿದ ಯಾವುದೋ ಗಿಡದ ಔಷಧಿಯಿಂದ ಅದು ಕಣ್ಮರೆಯಾಯಿತಂತೆ. ಯಾವುದಪ್ಪ ಆ ಕಾಯಿಲೆ ಎಂದು ಕೇಳಿದಾಗ "ಏನೊ ಕ್ಯಾನ್ಸರ್ ಅಂತ ಇದ್ರಪ್ಪ ಡಾಕ್ಟ್ರು ನನಗೆ ಅಷ್ಟೋಂದ್ ನೆನಪಿಲ್ಲ" ಎಂದಿದ್ದರು ನನ್ನ ಅಪ್ಪ. ಅಂದಿನಿಂದ ನನ್ನ ಚಿಕ್ಕಪ್ಪನ ಕಾಯಿಲೆ ಮತ್ತು ನನ್ನ ಮುತ್ತಜ್ಜನ ಕೊಟ್ಟ ಔಷಧಿ ತುಂಬಾ ಸಲ ನನ್ನ ತಲೆಯನ್ನು ಕೊರೆದಿದೆ. ಮೊನ್ನೆ ಹೀಗೆ ಸುಮ್ಮನೆ ಕಂಪ್ಯೂಟರ್ ಮುಂದೆ ಕುಳಿತಿದ್ದಾಗ ಕ್ಯಾನ್ಸರಿನ ನನ್ನ ಕುತೂಹಲವನ್ನು ಕೊನೆಗಳಿಸಬೇಕೆಂದು ಹುಡುಕುತ್ತಾ ಹೊರಟೆ.....



ಕ್ಯಾನ್ಸರ್ ಒಂದು  ವಿಚಿತ್ರ ಕಾಯಿಲೆ. ಇದು ಬರಲು ಹಲವಾರು ಕಾರಣಗಳಿವೆ ಅವುಗಳೆಂದರೆ ವಾತಾವರಣದ ಅಂಶಗಳಾದ ನೀರು, ಗಾಳಿ, ರಾಸಾಯನಿಕ ವಸ್ತುಗಳು, ಸೂರ್ಯನ ಕಿರಣಗಳು, ಇಂದಿನ ದಿನಗಳಲ್ಲಿ ಚಿಕ್ಕ ಮೂಳೆ ಮುರಿತಗಳನ್ನು ಪರೀಕ್ಷಿಸಲು ತೆಗೆಯುವ X-ray ವಿಕಿರಣಗಳಿಂದಲೂ ಹಾಗೂ ಪರಿಸರ ಮಾಲಿನ್ಯದಿಂದ ಓಝೋನ್ ಪದರ ಹಾನಿಯುಂಟಾಗಿ ಭೂಮಿಗೆ ಹೆಚ್ಚಾಗಿ ಬರುತ್ತಿರುವ ಅತಿನೇರಳೆ ವಿಕಿರಣಗಳಿಂದಲೂ ಸಹ  ಕ್ಯಾನ್ಸರ್ ಬರುತ್ತದೆ. ಈ ಮೇಲಿನ ಅಂಶಗಳನ್ನು ಗಮನಿಸಿದರೆ ಕ್ಯಾನ್ಸರ್ ರೋಗವು ಮಾನವನ ದುರಾಸೆಯಿಂದ ಪರಿಸರ ಹಾನಿಮಾಡುತ್ತಿರುವುದರಿಂದ ಬರುತ್ತಿದೆ ಎಂದು ವಿವರಣಾತ್ಮಕವಾಗಿ ಹೇಳಬಹುದು.



ಇಂದು ನಾವು ಕುಡಿಯುವ ನೀರು, ತಿನ್ನುವ ಆಹಾರವೆಲ್ಲ ರಾಸಾಯನಿಕ ಅಂಶಗಳಾದ ಸಲ್ಫೈಟ್, ನೈಟ್ರೈಟ್, ಫ್ಲೋರೈಡ್, ಕ್ಲೋರೈಡ್ ಗಳಿಂದ ಆವೃತಿಯಾಗಿವೆ. ಈ ರಾಸಾಯನಿಕಗಳು ನೀರು, ಆಹಾರದಲ್ಲಿ ಸೇರಲು ಮುಖ್ಯ ಕಾರಣ ನಾವು ಬೆಳೆ ಬೆಳೆಯಲು ಉಪಯೋಗಿಸುತ್ತಿರುವ ಕೀಟನಾಶಕಗಳು ಹಾಗೂ ಕಾರ್ಖಾನೆಯ ತ್ಯಾಜ್ಯ. ಈ ಕೀಟನಾಶಕಗಳು ಬೆಳೆಗೆ ತೊಂದರೆ ನೀಡುತ್ತಿರುವ ಕೀಟಗಳನ್ನು ಕೊಲ್ಲುತ್ತವೆಯಾದರೂ ಅಲ್ಲಿನ ಬೆಳೆಗಳಲ್ಲಿ  ಬೆರೆತು ನಮ್ಮ ದೇಹವನ್ನು ಸೇರಿ ಕ್ಯಾನ್ಸರ್ ರೋಗ ಬರಲು ಕಾರಣವಾಗುತ್ತದೆ.



ನಮ್ಮ ಪೂರ್ವಜರ ಹಾಗೂ ನಮ್ಮ ಜೀವನಶೈಲಿಯಲ್ಲಿ ಬದಲಾವಣೆಯೇ ರೋಗಗಳನ್ನು ತರಲು ಕಾರಣವಾಗಿದೆ. ಆದ್ದರಿಂದ ಈ ಪೀಳಿಗೆಯವರು ಹಿಂದಿನವರಿಗಿಂತ ಹೆಚ್ಚು ರೋಗಗಳಿಂದ ಬಳಲುತ್ತಿದ್ದಾರೆ. 1960 ರಲ್ಲಿ ಹತ್ತು ಮಿಲಿಯನ್ ಹೊಸ ರೀತಿಯ ಕ್ಯಾನ್ಸರ್ ಗಳು ಕಾಣಿಸಿಕೊಂಡಿವೆ ಹಾಗೂ ಕ್ಯಾನ್ಸರ್ ಇಂದ 12 ಮಿಲಿಯನ್ ಜನರು ಸಾವನ್ನಪ್ಪುತ್ತಿರುವುದು ದಾಖಲೆಯಾಗಿದೆ. ಇದಕ್ಕೆ ಮೇಲೆ ಹೇಳಿರುವಂತೆ ಜೀವನಶೈಲಿ ಒಂದು ಕಾರಣವಾದರೂ ಪರಿಸರ ಮಾಲಿನ್ಯ ಹಾಗೂ ಸೇವಿಸುವ ಆಹಾರಗಳು ಸಹ ಮುಖ್ಯ ಕಾರಣಗಳಾಗಿವೆ.

ಹಿಂದಿನಕಾಲದಲ್ಲಿ ಜನರು ತೆಗೆದುಕೊಳ್ಳುತ್ತಿದ್ದ ಆಹಾರ ತುಂಬಾ ಸಮತೋಲನವಾಗಿತ್ತು. ಅವರು ಮೂರು ಬಾರಿ ಮಾತ್ರ ಆಹಾರ ಸೇವಿಸುತ್ತಿದರು ಮತ್ತು ಅದಕ್ಕೆ ತಕ್ಕಂತೆ ಮೈ ಬಗ್ಗಿಸಿ ದುಡಿಯುತ್ತಿದ್ದರು. ಆದ್ದರಿಂದ ಅವರಿಗೆ ಬೊಜ್ಜು ಶೇಖರಣೆ, ಹೃದಯಾಘಾತಗಳು ತುಂಬ ವಿರಳ. ಆದರೆ ಈಗ ನಮ್ಮ ಆಹಾರ ಸೇವನೆಯ ಪದ್ಧತಿ ತುಂಬಾ ಬದಲಾಗಿದೆ. ನಾವು ಸೇವಿಸುವ ಆಹಾರದಲ್ಲಿ ಸರಿಯಾದ ಪ್ರಮಾಣದ ಕಾರ್ಬೋಹೈಡ್ರೈಟ್ಸ್, ಲಿಪಿಡ್ಸ್, ಪ್ರೋಟೀನ್ಸ್, ಮಿನರಲ್ಸ್ ಸಮತೋಲನದಲ್ಲಿರಬೇಕು. ಆದರೆ ಈಗ ಆಹಾರದ ಸಮತೋಲನ ತಪ್ಪಿದೆ. ಭಾರತದ ದಕ್ಷಿಣ ಭಾಗದ ಭೋಜನ ತಟ್ಟೆಯನ್ನು ನೋಡಿದರೆ ನಾವು ಮುದ್ದೆ, ಪಲ್ಯ, ಉಪ್ಪಿನಕಾಯಿ, ತರಕಾರಿಯಿಂದ ಕೂಡಿದ ಪೌಷ್ಟಿಕ ಆಹಾರಗಳನ್ನು ಕಾಣಬಹುದು. ಮುದ್ದೆ ರಾಗಿಯಿಂದ ಮಾಡಿದ ಪದಾರ್ಥ ಡೈಯಬಿಟೀಸ್ ನ ಪಕ್ಕ ವೈರಿ. ಉಪ್ಪಿನ ಕಾಯಿಯ ಸಿಟ್ರಿಕ್ ಆಸಿಡ್ ಫ್ರೀ ರಾಡಿಕಲ್ ಪ್ರತಿಕ್ರಿಯೆ ತಡೆಯುತ್ತದೆ. ಆದ್ದರಿಂದ ಕ್ಯಾನ್ಸರ್ ನ್ನು ತಡೆಯುತ್ತದೆ. ಇನ್ನು



ನಾವು ದಿನ ಬಳಸುತ್ತಿರುವ ಹಾಲಿನ ವಿಷಯಕ್ಕೆ ಬಂದರೆ ನಮ್ಮ ತಾತಂದಿರು ಹಾಲಿಗೋಸ್ಕರ ನಾಟಿ ಹಸುಗಳನ್ನು ಬಳಸುತ್ತಿದ್ದರು. ಅದು ನಮ್ಮ ದೇಹಕ್ಕೆ ಬೇಕಾದ ಪೌಷ್ಟಿಕಾಂಶಗಳೆಲ್ಲವನ್ನೂ ಹೊಂದಿತ್ತು. ಆದರೆ ಈಗ ಹೆಚ್ಚು ಹಾಲು ಕೊಡುವ ಹೈಬ್ರಿಡ್ ಹಸುಗಳು ಬಂದಿವೆ. ಇವು ಹಾಲನ್ನೇನೋ ಹೆಚ್ಚು ಕೊಡುತ್ತವೆ ಆದರೆ ಇವುಗಳಲ್ಲಿನ ಪೌಷ್ಟಿಕಾಂಶ ಬಹಳ ಕಡಿಮೆ.




ಹಿಂದಿನ ಕಾಲದಲ್ಲಿ ಆಹಾರದ ಜೀವಿತಾವಧಿಯನ್ನು ಹೆಚ್ಚಿಸಲು ಸ್ವಾಭಾವಿಕ ಪದಾರ್ಥಗಳನ್ನು ಬಳಸುತ್ತಿದ್ದರು. ಉದಾ: ಉಪ್ಪು, ಸಕ್ಕರೆ, ಸೂರ್ಯನ ಬಿಸಿಲಿನಲ್ಲಿ ಒಣಗಿಸಿಡುವುದು ಇತ್ಯಾದಿ. ಆದರೆ ಈಗ ರಾಸಾಯನಿಕ ಪದಾರ್ಥಗಳನ್ನು ಬಳಸುತ್ತಿರುವ ಪರಿಣಾಮವೇ ಈಗಿನ ಪೀಳಿಗೆಯು ಅನುಭವಿಸುತ್ತಿರುವುದು. ಆದ್ದರಿಂದ ಪಿಜ್ಜಾ, ಬರ್ಗರ್, ಕೆಂಪು ಮಾಂಸಗಳನ್ನು ತಿಂದು ರೋಗ ತರಿಸಿಕೊಳ್ಳುವ ಬದಲು ನಮ್ಮ ಹಿತ್ತಲಿನಲ್ಲಿ ಬೆಳೆದ ತರಕಾರಿ, ಹಣ್ಣು, ಹಂಪಲುಗಳನ್ನು ತಿನ್ನುವುದು ಒಳ್ಳೆಯದು. ಹೀಗೆ ಆಹಾರ ಪದ್ಧತಿಯು ಕ್ಯಾನ್ಸರ್ ತರುತ್ತದೆ. ಇನ್ನು ನಮ್ಮ ಯುವ ಪೀಳಿಗೆಯು ಆಕರ್ಷಿತವಾಗುತ್ತಿರುವ ತಂಬಾಕು ಸೇವನೆ ತುಂಬಾ ಅಪಾಯಕಾರಿ. ಈಗ ಬಹಳ ಜನ ಕ್ಯಾನ್ಸರ್ ನಿಂದ ಬಳಲುತ್ತಿರುವುದೇ ತಂಬಾಕು ಹಾಗೂ ಸಿಗರೇಟ್ ಸೇವನೆಯಿಂದ.ಇದು ಒಂದು ರಾತ್ರಿಯಲ್ಲಿ ಬರುವ ಕಾಯಿಲೆಯಲ್ಲ. ಇದು ಯಾವುದೇ ಸೂಕ್ಷ್ಮ ಜೀವಿಗಳಿಂದ ಬರುವುದಿಲ್ಲ. ನಮ್ಮ ದೇಹದಲ್ಲಿನ ಜೀವಕಣಗಳ ಅಸಹಜ ಬೆಳವಣಿಗೆಯಿಂದ ಉಂಟಾಗುತ್ತದೆ.

ಇನ್ನು ಕ್ಯಾನ್ಸರ್ ಗುಣಪಡಿಸಲು ಆಧುನಿಕ ತಂತ್ರಜ್ಞಾನವನ್ನು ಹಾಗೂ ನಮ್ಮ ಮುತ್ತಜ್ಜ ಉಪಯೋಗಿಸಿದ ನೈಸರ್ಗಿಕ ಔಷಧಿಯನ್ನು ಬಳಸಬಹುದು. ನಮ್ಮ ತಂದೆಯವರು ಹೇಳಿದ್ದ ಘಟನೆಯಿಂದ ನನಗೆ ನೈಸರ್ಗಿಕ ಔಷಧಿಯು ಕ್ಯಾನ್ಸರ್ ಗುಣಪಡಿಸಲು ಆಧುನಿಕ ತಂತ್ರಜ್ಞಾನಕ್ಕಿಂತ ಪರಿಣಾಮಕಾರಿ ಎಂದು ತಿಳಿದಿತ್ತು. ಆದರೆ ಅವರು ಯಾವ ಗಿಡವನ್ನು ಔಷಧಿಯಾಗಿ ಬಳಸಿದ್ದರು ಎಂಬ ಪ್ರಶ್ನೆಗೆ ಉತ್ತರ ಹುಡುಕಲು ನಾನು ಇನ್ನು ಹೆಚ್ಚು ಸರ್ಕಸ್ ಮಾಡಬೇಕಾಯಿತು. ಒಮ್ಮೆ ನಮ್ಮ ತಂದೆಯ ಜೊತೆ ಹಾಗೆ ತೋಟದಲ್ಲಿ ತಿರುಗಾಡಲು ಹೊರಟಾಗ ನಾನು ಪಕ್ಕದಲ್ಲೆ ಇದ್ದ ಯಾವುದೋ ಗಿಡವನ್ನು ತೋರಿಸಿ "ಯಾವುದಪ್ಪ ಆ ಗಿಡ" ಎಂದೆ ಅದಕ್ಕೆ ಅಪ್ಪ" ಅದ ಪಾವಟೆ ಕಣಮ್ಮ ಅದೆ ನಾನ್ ಹೇಳರ್ಲಿಲ್ವ ನಿಮ್ಮ ಚಿಕ್ಕಪ್ಪನ್ನ, ಮುತ್ತಜ್ಜ ಯಾವುದೋ ದೊಡ್ಡ ಕಾಯಿಲೆಯಿಂದ ಬದುಕಿಸಿದ್ರು ಅಂತ ಇದೇ ಗಿಡದಿಂದಾನೇ ವಾಸೆ ಮಾಡಿದ್ದು" ಅಂದರು. ನಾನು "ಯಾಕ್ ಇಷ್ಟ್ ದಿನ ಮತ್ತೆ ನನ್ಗೆ ಹೇಳಲೆ ಇಲ್ಲ " ಅಂದದಕ್ಕೆ "ನೀನು ಚಿಕ್ಕ ಹುಡುಗಿ ಹೇಳುದ್ರೆ ಎಲ್ಲಿ ನೆನಪಿರುತ್ತೆ ಅಂತ ಹೇಳ್ಲಿಲ್ಲ" ಅಂದರು ಅಂತು ನನ್ನ ತಲೆಯಲ್ಲಿ ಚಿಕ್ಕಂದಿನಿಂದಲೂ ಕೊರೆಯುತ್ತಿದ್ದ ಒಂದು ಪ್ರಶ್ನೆಗೆ ಅಂದು ಉತ್ತರ ಸಿಕ್ಕಿತು. ಇಷ್ಟಕ್ಕೆ ಸುಮ್ಮನಾಗದ ನಾನು ಆ ಗಿಡದ ಬಗ್ಗೆ ಮತ್ತಷ್ಟು ತಿಳಿಯಲು ನಮ್ಮ ಗ್ರಂಥಾಲಯದಲ್ಲಿದ್ದ ಮರಗಳ ಬಗೆಗಿನ ಪುಸ್ತಕವನ್ನು ಹುಡುಕಿ ನೋಡಿದಾಗ ಅದು "ಪಾವಟೆ ಇಂಡಿಕಾ" (Pavetta

indica) ಎಂದು ಕಂಡು ಬಂತು. ಈ ಸಸ್ಯ, ದಕ್ಷಿಣ ಭಾರತದ ಒಣ ಎಲೆಯುದುರುವ ಕಾಡುಗಳಾದ ಮುತ್ತತ್ತಿ, ಮಲೈಮಹದೇಶ್ವರ ಬೆಟ್ಟ, ಬನ್ನೇರುಘಟ್ಟ, ಬಿಳಿಗಿರಿ ರಂಗನ ಬೆಟ್ಟ ಕಾಡುಗಳಲ್ಲಿ ಕಾಣಸಿಗುವ ಸಣ್ಣ ಮರ ಅಥವಾ ಗಿಡ, ನಾಲ್ಕು ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಕಾಂಡ, ತೊಗಟೆ ಕಂದು ಬಣ್ಣದಿಂದ ಕೂಡಿದ್ದು ನುಣುಪಾಗಿರುತ್ತದೆ. ಈ ಗಿಡದ ಕಾಂಡವು ಸಿಲಿಂಡರಿನಾಕಾರವಾಗಿದ್ದು, ನೆಟ್ಟಗೆ ಅನಿಯಮಿತ ಸರಳ ಎಲೆಗಳನ್ನು ಹೊಂದಿದ್ದು ಎದಿರು-ಬದಿರಾಗಿರುತ್ತವೆ ಅಥವಾ ಅಂಡಾಕಾರವಾಗಿ ಅಂಚು ಸರಳವಾಗಿರುತ್ತದೆ.ಬಿಳಿ ಹೂಗಳು ರೆಸಿಮೋಸ್ ಅಥವಾ ಸೈಮೋಸ್. ಹಣ್ಣು ಓಟೆ ವಿಧ. ಈ ಗಿಡವು ಬರಿ ಕ್ಯಾನ್ಸರ್ ನ್ನಷ್ಟೆ ಅಲ್ಲದೆ ಮೂಲವ್ಯಾಧಿ, ಮೂತ್ರವರ್ಧಗಳನ್ನು ಗುಣಪಡಿಸುವ ಶಕ್ತಿ ಹೊಂದಿದೆ.

ನನ್ನ ಮುತ್ತಜ್ಜ ಈ ಗಿಡದ ಬೇರುಗಳನ್ನು ಅರೆದು ಪ್ರತಿದಿನ ನನ್ನ ಚಿಕ್ಕಪ್ಪನಿಗೆ ನೈಸರ್ಗಿಕ ಔಷಧವನ್ನು ತಯಾರಿಸಿ ಕುಡಿಸುತ್ತಿದ್ದರಂತೆ ಕೆಲ ದಿನಗಳ ನಂತರ ನನ್ನ ಚಿಕ್ಕಪ್ಪನಿಗಿದ್ದ ಕ್ಯಾನ್ಸರ್ ಗುಣವಾಯಿತಂತೆ...! ಈ ಅಧುನಿಕ ಜಗತ್ತಿಗೆ, ಆಧುನಿಕ ತಂತ್ರಜ್ಞಾನಕ್ಕೆ ಸಡ್ಡೆ ಒಡೆದು ನಿಂತಿದೆ ಈ ಪಾವಟೆ. ನಾನು ಪಾವಟೆ ಇಂಡಿಕಾ ಗಿಡವನ್ನು ನೋಡಿದಾಗಲೆಲ್ಲಾ ನನಗೆ "ಹಿತ್ತಲ ಗಿಡವೂ ಮದ್ದೇ" ಎಂದು ಅನಿಸುತ್ತದೆ.



- ಶಾಂತಮ್ಮ.ಎಸ್., CFTRI ಮೈಸೂರು


ಗಿಡ–ಮರಗಳನ್ನು
ಮುಟ್ಟಿ ಮಾತನಾಡಿಸಿದ್ದೀರಾ?

ಮನುಷ್ಯರು, ಪ್ರಾಣಿಗಳು, ಕೀಟಗಳು ಹಾಗೂ ಚಲನೆಯಿರುವ ಎಷ್ಟೋ ಜೀವಿಗಳು ಮತ್ತು ಹಸಿರು ಸಸ್ಯವರ್ಗ ಎಲ್ಲವೂ ತಮ್ಮತಮ್ಮ ಬದುಕಿಗೆ ಪರಸ್ಪರ ಅವಲಂಬಿಸಿವೆ. ಈ ಜಗತ್ತಿನ ಅತ್ಯಮೂಲ್ಯ ಸಂಪತ್ತಾದ ಹಾಗೂ ನಮ್ಮೆಲ್ಲರಿಗೂ ಹೆಮ್ಮೆಯ ಪಶ್ಚಿಮಘಟ್ಟದ ಮೇಲೆ ಅಭಿವೃದ್ಧಿಯ ಹೆಸರಿನಲ್ಲಿ ಕೊನೆಮೊದಲಿಲ್ಲದಂತೆ ಅತ್ಯಾಚಾರವೆಸಗಲಾಗುತ್ತಿದೆ.

ಮೂಡಿಗೆರೆಯ ಹ್ಯಾಂಡ್‌ಪೋಸ್ಟ್ ನಿಂದ ಭೈರಾಪುರದ ನಾಣ್ಯದ ಭೈರವೇಶ್ವರ ದೇವಾಲಯದವರೆಗೆ ಅಗತ್ಯ, ಸಾಧ್ಯ ಮತ್ತು ಸಂಪನ್ಮೂಲ ಒದಗಿ ಬಂದರೆ 2 ಲೇನ್ ರಸ್ತೆಯನ್ನೇ ಮಾಡೋಣ. ಈ ಭಾಗದ ನಮ್ಮ ಜನರಿಗೆ ಅಗತ್ಯ ಮೂಲಭೂತ ಸೌಲಭ್ಯ ಒದಗಿಬರಲಿ. ದೇವಾಲಯದ ಬಳಿ ಸುಸಜ್ಜಿತವಾದ ಪ್ರವಾಸಿಮಂದಿರ ನಿರ್ಮಾಣವಾಗಲಿ. ಅದರ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಸ್ಥಳೀಯ ಪಂಚಾಯ್ತಿಯೇ ಮಾಡಲಿ. ವರ್ಷದ ಯಾವುದೇ ಋತುವಿನಲ್ಲೂ ಕನಿಷ್ಠ 20 ಜನ ತಂಗಲು ಸಾಧ್ಯವಿರುವಂತೆ 10 ಕೊಠಡಿಗಳನ್ನು ನಿರ್ಮಾಣ ಮಾಡೋಣ. ದೇವಾಲಯ ಮತ್ತು ಚಾರಣ ಬಂದವರಿಗೆ ಶೌಚಾಲಯ ಮತ್ತು ಸ್ನಾನಗೃಹ ವ್ಯವಸ್ಥೆ ಮಾಡೋಣ. ಭೈರಾಪುರ ಗ್ರಾಮವನ್ನು ದಾಟಿಬರುವ ಎಲ್ಲ ಪ್ರವಾಸಿಗರು, ಚಾರಣಿಗರನ್ನು ಮದ್ಯ, ಮಾದಕ ಪದಾರ್ಥ ಮತ್ತು ಪ್ಲಾಸ್ಟಿಕ್ ವಸ್ತುಗಳನ್ನು ತೆಗೆದುಕೊಂಡುಹೋಗದಂತೆ ತಪಾಸಣೆಗೊಳಪಡಿಸಿ ತಲಾ ಕನಿಷ್ಠ 20 ರೂಪಾಯಿ ಪ್ರವೇಶ ಶುಲ್ಕ ವಿಧಿಸೋಣ. ಈ ಎಲ್ಲಾ ಕಾರ್ಯ ನಿರ್ವಹಿಸಲು ಸ್ಥಳೀಯ ಯುವ ಜನತೆಗೇ ಉದ್ಯೋಗ ನೀಡೋಣ. ಇಲ್ಲಿ ಕಾಫಿ ಮಂದಿರ, ಹೋಟೆಲ್ ಕಟ್ಟಡ ನಿರ್ಮಿಸಿ ಸ್ಥಳೀಯರಿಗೇ ಗುತ್ತಿಗೆಗೆ ನೀಡೋಣ.

ಇದೇ ರೀತಿಯ 4 ಪಥ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 75ರಿಂದ ಶಿಶಿಲ ಗ್ರಾಮದವರೆಗೂ ನಿರ್ಮಿಸಿ ಈ ಎಲ್ಲ ಸಾರ್ವಜನಿಕ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿ ಅಲ್ಲಿನ ಸ್ಥಳೀಯ ಯುವಕರಿಗೇ ಉದ್ಯೋಗ ನೀಡೋಣ. ಆದರೆ ಈ ಎರಡೂ ರಸ್ತೆಗಳ ಕೊನೆಗಳನ್ನು ಲಿಂಕ್ ಮಾಡುವ ಅವಿವೇಕ ಮಾತ್ರ ಬೇಡವೇ ಬೇಡ.



ನಮಗೆ ನಿಜವಾದ ಹೆಮ್ಮೆ, ಅಭಿಮಾನ ಇರಬೇಕಾಗಿದ್ದು ರಸ್ತೆ, ಸೇತುವೆ, ಕಾಂಕ್ರೀಟ್ ಕಟ್ಟಡಗಳ ಮೇಲಲ್ಲ. ಇವನ್ನು ಯಾರೂ ಎಲ್ಲಿ ಬೇಕಾದರೂ ನಿರ್ಮಿಸಬಹುದು. ಆದರೆ ನಮ್ಮ ನಿಜವಾದ ಹೆಮ್ಮೆಯ ಸಂಪತ್ತು ನಮ್ಮ ಕಾಡುಗಳು. ಸಾವಿರಾರು ವರ್ಷಗಳಿಂದ ನಮ್ಮನ್ನು, ನಮ್ಮ ನಾಗರೀಕತೆಯನ್ನು ಕಾಪಾಡಿಕೊಂಡು ಬಂದಿರುವುದು ನಮ್ಮ ನೆಲೆವೀಡಾದ ನಮ್ಮ ಕಾಡುಗಳು. ಇಂದು ಸಂಶೋಧಕರು, ಪ್ರವಾಸಿಗರು, ಸಾಹಸಿಗಳು ನಮ್ಮೂರಿಗೆ ಬರುತಿದ್ದಾರೆ ಎಂದರೆ ಅದಕ್ಕೆ ಕಾರಣ ನಮ್ಮೂರಿನ ರಸ್ತೆಗಳು, ಸೇತುವೆಗಳು, ಹೋಟೆಲುಗಳು ಮತ್ತು ರೆಸಾರ್ಟುಗಳಲ್ಲ. ವಾಸ್ತವ ಕಾರಣಗಳು ನಮ್ಮ ಕಾಡುಗಳು, ಅಲ್ಲಿಯ ಪ್ರಶಾಂತ ವಾತಾವರಣ, ಇಲ್ಲಿನ ಸ್ವಚ್ಛಗಾಳಿ, ಶುಭ್ರ ನೀರು, ಕಾಡಿನ ನಿಗೂಢತೆ, ಹೃದಯಸ್ಪರ್ಶಿ ಆಪ್ತತೆಯ ವಾತಾವರಣ ಮತ್ತು ಮನತಣಿಸುವ ಹಚ್ಚಹಸಿರು. ಇವನ್ನೆಲ್ಲ ಬದಿಗಿರಿಸಿ ರಸ್ತೆ ನಿರ್ಮಿಸಿ, ಇಲ್ಲಿ ಇನ್ನೊಂದು ಕೊಟ್ಟಿಗೆಹರ, ಇನ್ನೊಂದು ದೋಣೀಗಾಲನ್ನು ಸೃಷ್ಟಿ ಮಾಡುವುದು ಬೇಡ.

ಮಲೆನಾಡಿನ ಬಾಂಧವರೇ ನಾವೀಗ ಕವಲುಹಾದಿಯಲ್ಲಿ ನಿಂತಿದ್ದೇವೆ. ರಸ್ತೆ ನಿರ್ಮಿಸುವ ಆಯ್ಕೆಯ ಹಾದಿ ನಮಗೀಗ ವರ್ಣರಂಜಿತವಾಗಿ ಕಾಣುತ್ತಿರಬಹುದು. ಆದರೆ ಆ ಹಾದಿಯಲ್ಲಿ ನಾವು ಕ್ರಮಿಸಿದಲ್ಲಿ ಮುಂದೆಂದೂ ಹಿಂದಿರುಗಿ ಬರಲಾಗದ, ಸರಿಪಡಿಸಲು ಸಾಧ್ಯವಾಗದ ಅನಾಹುತಕ್ಕೆ ನಾವೇ ಕಾರಣವಾಗುತ್ತೇವೆ. ನೂರಾರು ವರ್ಷಗಳಿಂದ ಭೈರಾಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನರು ಕಾಪಾಡಿಕೊಂಡು ಬಂದಿರುವ ಸ್ವಾಭಿಮಾನ, ಆತ್ಮಗೌರವ, ಸಾಂಸ್ಕೃತಿಕ ವೈಭವ, ಕಾಡನ್ನು ಉಳಿಸಿಕೊಂಡುಬಂದಿರುವ ಘನತೆ, ಪ್ರಕೃತಿಯೊಂದಿಗಿನ ಅನ್ಯೋನ್ಯ ಬಾಂಧವ್ಯ, ಕೃಷಿಬದುಕಿನ ಅವಿನಾಭಾವ ಸಂಬಂಧ ಇವೆಲ್ಲವೂ ಹೆದ್ದಾರಿಯೆಂಬ ಹೆಮ್ಮಾರಿಯ ಪಾಲಾಗುತ್ತದೆ. ಇಲ್ಲಿನ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ವಿನಾಶಕಾರೀ ಬಿರುಗಾಳಿಯೇಳುತ್ತದೆ. ಪರಕೀಯರ ಅನಪೇಕ್ಷಿತ ಆಗಮನವನ್ನು ನಿಯಂತ್ರಿಸಲಾಗದ ಇವತ್ತಿನ ಸ್ಥಿತಿಯಲ್ಲಿ ಈ ಭಾಗದಲ್ಲಿ ಸ್ಥಳೀಯರೇ ಮೂಲೆಗುಂಪಾಗುತ್ತಾರೆ. ಕೃಷಿ ಮಾಡಿಕೊಂಡು ನೆಮ್ಮದಿಯ, ಸ್ವಾವಲಂಬೀ ಬದುಕು ಕಟ್ಟಿಕೊಂಡಿರುವ ಸ್ಥಳೀಯರು ಹದ ತಪ್ಪಿದ ಬದುಕಿನಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ದಯನೀಯ ಸ್ಥಿತಿ ತಲುಪುತ್ತಾರೆ. ನೈತಿಕ ಅದಃಪತನಕ್ಕೆ ಕಾರಣವಾಗುವ ಈ ಹೆದ್ದಾರಿಯೆಂಬ ಹೆಮ್ಮಾರಿ ಉಂಟುಮಾಡುವ ಕೆಡುಕಿಗೆ ಕೊನೆಯಿಲ್ಲದಂತಾಗುತ್ತದೆ.



ನೆಮ್ಮದಿಯಾಗಿರುವ ನಮ್ಮ ಭೈರಾಪುರ ಗ್ರಾಮಕ್ಕೆ ಸಮಾಜವಿರೋಧಿಗಳ ಪ್ರವೇಶವಾಗುತ್ತದೆ, ಭೂಗತಲೋಕದ ಅಪರಾಧಿಗಳು ಅವಿತುಕೊಳ್ಳಲು ಅವಕಾಶವಾಗುತ್ತದೆ. ಅನೈತಿಕ ಚಟುವಟಿಕೆಗಳು ಕಣ್ಣಮುಂದೆಯೇ ನಡೆಯುತ್ತಿದ್ದರೂ ಏನೂ ಮಾಡಲಾಗದ ಅಸಹಾಯಕತೆಯಿಂದ ಆಲಾಡಬೇಕಾಗುತ್ತದೆ. ನೋಡನೋಡುತಿದ್ದಂತೆ ಮಹಾನಗರಗಳ ಕೊಳಗೇರಿಗಳಲ್ಲಿ ನಡೆಯುವ ಎಲ್ಲಾ ಅನಪೇಕ್ಷಿತ ಚಟುವಟಿಕೆಗಳು ನಮ್ಮದೇ ಗ್ರಾಮದೊಳಗೆ ಮತ್ತು ಹೆದ್ದಾರಿಯುದ್ದಕ್ಕೂ ಅವ್ಯಾಹತವಾಗಿ ನಡೆಯಲು ಶುರುವಾಗುತ್ತವೆ.



ಅಮಾಯಕ ಜನರಲ್ಲಿ ಇಲ್ಲಸಲ್ಲದ ಭ್ರಮೆ ಹುಟ್ಟಿಸಿರುವ ರಸ್ತೆ-ಸೇತುವೆ ಗುತ್ತಿಗೆದಾರರು, ಮರಗಳ್ಳ ಟಿಂಬರ್ ಲಾಬಿಯವರು, ಗುಂಜಪ್ಪಗಳಾದ ಸಂಬಂಧಿತ ಅಧಿಕಾರಿಗಳು, ಯಲ್ಲಮ್ಮನ ಜಾತ್ರೆಗೆ ಕಾದಿರುವ ರಾಜಕಾರಣಿಗಳು, ಉಂಡೋನೇಜಾಣರಾಗಲು ಕಾದಿರುವ ಅನಧಿಕೃತ ರೆಸಾರ್ಟ್‌ವೀರರುಗಳಿಗೆ ನಿಜವಾದ ಕಾಳಜಿಯಿದ್ದಲ್ಲಿ, ಈ ಭಾಗದ ಜನರ ಮೂಲಭೂತ ಅಗತ್ಯಗಳಾದ ರಸ್ತೆ, ನೀರು, ವಿದ್ಯುತ್, ಸಾರಿಗೆ ಸಂಪರ್ಕ ಮತ್ತು ಕಾಡುಪ್ರಾಣಿಗಳ ಉಪಟಳ ತಡೆ, ಅರ್ಹರಿಗೆ ಸ್ಥಳೀಯ ಉತ್ಪನ್ನಗಳಾದಾರಿತ ಉದ್ದಿಮೆಗಳನ್ನು ರೂಪಿಸಿಕೊಂಡು, ಸ್ವಾವಲಂಬೀ ಬದುಕು ಕಟ್ಟಿಕೊಳ್ಳಲು ಕೈಜೋಡಿಸಲಿ. ಉದಾಹರಣೆಗೆ ಕನಿಷ್ಠ ನೂರೈವತ್ತು ಜನರಿಗೆ ಉದ್ಯೋಗ ನೀಡುವ ಬೃಹತ್ ಮಿನರಲ್ ವಾಟರ್ ಬಾಟಲಿಂಗ್ ಘಟಕ, ಕಾಫೀಬೊಡ್ಡೆಯಿಂದ ಕರಕುಶಲವಸ್ತು ಮಾಡುವ ಕಾರ್ಯಾಗಾರ, ಸ್ಥಳೀಯವಾಗಿ ದೊರೆಯುವ ಕೃಷಿ ಉತ್ಪನ್ನ (ಬಾಳೆ, ಭತ್ತ, ಹಲಸು)ಗಳಿಂದ ಆಹಾರೋತ್ಪನ್ನ ತಯಾರಿ ಘಟಕ, ಶುಂಠಿ, ಏಲಕ್ಕಿ, ಕರಿಮೆಣಸು, ಜೇನು, ನಿಂಬೆಹುಲ್ಲು ಮುಂತಾದ ಕೃಷಿಉತ್ಪನ್ನಗಳನ್ನು ಮೌಲ್ಯವರ್ಧನೆಗೊಳಿಸುವ ಸುಗಂಧದ್ರವ್ಯ ಉತ್ಪಾದನಾ ಕೈಗಾರಿಕೆಗಳನ್ನು ಸ್ಥಾಪಿಸಬಹುದು. ಈ ಪ್ರದೇಶದಲ್ಲಿ ಅರಣ್ಯಶಾಸ್ತ್ರ ಅಧ್ಯಯನಕ್ಕಾಗಿ ಒಂದು ಕಾಲೇಜನ್ನು ಸ್ಥಾಪಿಸಬಹುದು. ಕೃಷಿಕರು ಹಾಗು ಉದ್ಯೋಗಾಂಕ್ಷಿಗಳಿಗೆ ಸ್ವಾವಲಂಬಿ ಮತ್ತು ಗೌರವದ ಬದುಕನ್ನು ಕಟ್ಟಿಕೊಳ್ಳಲು ಅವಕಾಶ ನೀಡುವತ್ತ ಸರ್ಕಾರ ಮುಂದಾಗಬೇಕು. ಈ ಅನಗತ್ಯ ರಸ್ತೆಗೆ ವ್ಯಯಮಾಡಲು

ಇಟ್ಟುಕೊಂಡಿರುವ ಹಣವನ್ನು ಈ ಮೇಲಿನ ಉದ್ದೇಶಗಳಿಗೆ ಬಳಸಿದಲ್ಲಿ ನಮ್ಮ ನಿಮ್ಮೆಲ್ಲರ ಕಾಡೂ ಉಳಿಯುತ್ತದೆ ಮತ್ತು ಈ ಭಾಗದ ಜನರ ಬದುಕಿನಲ್ಲಿ ಒಂದು ಹೊಸ ಯುಗ ಆರಂಭವಾಗುತ್ತದೆ.

ಭೂದೇವಿಯ ತೋಳಿನ ಮೇಲೆ ಕಾಯ್ದ ಸಲಾಕೆಯಿಂದ ಇನ್ನೊಂದು ರಸ್ತೆಯೆಂಬ ಬರೆ ಎಳೆಯುವುದು ಬೇಡ. ಈ ವಿಚಾರದಲ್ಲಿ ರಾಜಕಾರಣಿಗಳ ತಿಣುಕಾಟ ಗಮನಿಸಿದರೆ, ಅವರೆಲ್ಲರಿಗೂ ಪರಿಸರಪ್ರಜ್ಞೆಯಿದೆ, ಹಾಗೆಯೇ ನಮ್ಮ ಕಾಡುಗಳನ್ನು ಉಳಿಸಿಕೊಳ್ಳಬೇಕೆಂಬ ಕಾಳಜಿಯೂ ಇದೆ ಎನ್ನುವುದು ವೇದ್ಯವಾಗುತ್ತದೆ. ಆದರೆ ಇವೆಲ್ಲಕ್ಕಿಂತಲೂ ಮುಖ್ಯವಾಗಿ ಚುನಾವಣಾ ರಾಜಕೀಯದ ದಾರುಣ ಅನಿವಾರ್ಯತೆಯೂ ಇದೆ ಎಂಬುದು ಅರ್ಥವಾಗುತ್ತದೆ. ಹೆಮ್ಮಾರಿ ರಸ್ತೆ ಬರುವುದರಿಂದ ಈ ಭಾಗದ ಗ್ರಾಮಗಳ ಸ್ಥಿರಾಸ್ತಿ ಮೌಲ್ಯ ಹೆಚ್ಚುತ್ತದೆ ಎಂಬುದು ಸತ್ಯವಾದರೂ, ಆ ಹೆಚ್ಚಾದ ಮೌಲ್ಯದ ನಿಜ ಫಲಾನುಭವಿ ಯಾರು? ಅಲ್ಲಿನ ಮೂಲನಿವಾಸಿಗಳೇ ಆ ಭೂಮಿಯ ಮಾಲೀಕತ್ವವನ್ನು ಅನುಭವಿಸಬೇಕು. ಹಾಗೆಯೇ ನಿಮ್ಮ ಅಗತ್ಯಗಳನ್ನು ನೆಪವಾಗಿಟ್ಟುಕೊಂಡು ನಿಮ್ಮದೇ ಮನೆಯ ಜಂತಿಯನ್ನು ಹಿರಿದು ಬೇಳೆ ಬೇಯಿಸಿಕೊಳ್ಳಲು ಹವಣಿಸುತ್ತಿರುವವರನ್ನು ದೂರವಿಡುವುದು ಭವಿಷ್ಯದ ದೃಷ್ಠಿಯಿಂದ ಒಳ್ಳೆಯದು.

ಕಾಡಿರುವುದರಿಂದಲೇ ಪುಣ್ಯಕ್ಷೇತ್ರಗಳು, ಗ್ರಾಮಗಳು, ಜನವಸತಿ, ಕೃಷಿ, ಆಹಾರ, ಪ್ರವಾಸೋದ್ಯಮ ಇತ್ಯಾದಿಗಳೇ ಹೊರತು ಇವುಗಳಿಂದ ಕಾಡಲ್ಲ ಎಂಬ ಸತ್ಯ ಅರಿವಾಗಲಿ. ಭೂಮಿಯ ಮೇಲಿನ ಜನಸಂಖ್ಯೆಗಿಂತ ಹೆಚ್ಚು ಸಂಖ್ಯೆಯ ಸೂಕ್ಷ್ಮಜೀವಿಗಳು ಒಂದು ಚಮಚ ಮಣ್ಣಿನಲ್ಲಿರುತ್ತವೆ ಎಂಬುದು ಈ ಜೀವಜಗತ್ತಿನ ಅನನ್ಯತೆ, ಅಗಾಧತೆ ಮತ್ತು ಅಮೂಲ್ಯತೆಯನ್ನು ಹೇಳುತ್ತದೆ. ನಮ್ಮ ಪಶ್ಚಿಮಘಟ್ಟ 140 ಬಗೆಯ ಸಸ್ತನಿಗಳ, 510 ಪ್ರಭೇದದ ಪಕ್ಷಿಗಳ, 260 ರೀತಿಯ ಸರೀಸೃಪಗಳ, 18 ವಿಶಿಷ್ಠ ಉಭಯವಾಸಿಗಳ ಹಾಗೂ ಭಾರತದ ಶೇಖಡಾ 25ರಷ್ಟು ಜೀವವೈವಿಧ್ಯದ ಆವಾಸಸ್ಥಾನವಾಗಿದೆ. ಇದಕ್ಕಿಂತ ಭಾಗ್ಯ ಬೇರೇನಿದೆ? ಕೇವಲ ಒಂದು ಅನಗತ್ಯ ಹಾಗೂ ಅನಾಹುತಗಳಿಗೆಡೆಮಾಡುವ ಬೇಡದ ರಸ್ತೆಗಾಗಿ ಈ ಕಾಡಿನ ಒಡೆಯರು ನಾವು ಎಂಬ ಹೆಮ್ಮೆಯನ್ನು ಕಳೆದುಕೊಳ್ಳುವುದೇ?.




- ಧನಂಜಯ ಜೀವಾಳ ಬಿ.ಕೆ., ಮೂಡಿಗೆರೆ.

# ಮಣ್ಣು ಮಸಿ



ನಮ್ಮ ಶಾಲೆಯಿಂದ ಮನೆ ಇರೋದು 2 ಕಿಮೀ ದೂರದಲ್ಲಿ. ಸಾಮಾನ್ಯವಾಗಿ ಎಲ್ಲರೂ ಚಿಕ್ಕ ವಯಸ್ಸಲ್ಲಾಡುವ ಎಲ್ಲಾ ಆಟಗಳು ನಾವು ಆಡಿದ್ದೇವೆ. ಆದರೆ ನಮಗೆ ಈ ಎರಡು ಕಿಮೀ ದೂರ ಇನ್ನೂ ಸ್ವಲ್ಪ ಹೆಚ್ಚು ಸಮಯ ನಮಗೆ ಕೆಲ 'ಸಾಹಸ ಆಟ' ಆಡಲು ಸಿಗುತ್ತಿತ್ತು. ಆದ್ದರಿಂದ ಸಾಮಾನ್ಯವಾಗಿ ನಮ್ಮ ಬಟ್ಟೆಗಳು ಸಹ ಸ್ವಲ್ಪ ಹೆಚ್ಚಾಗಿಯೇ ಕೊಳೆ ಆಗಿರುತ್ತಿತ್ತು. ಮನೆಗೆ ಬಂದೊಡನೆ ಅಮ್ಮ "*ಯಾವ ಮಣ್ಣಲ್ಲಿ ಬಿದ್ದು ಬಂದ್ರೋ..... ನಿಮ್ಗೇನು.!! ಮಣ್ಣು ಮಸಿ ನೋಡಲ್ಲ, ಬಟ್ಟೆ ಹೊಗ್ಯೋಳು ನಾನು.*" ಎನ್ನುತ್ತಾಳೆ ಅನ್ನೋದು ರೂಢಿಯಾಗಿಬಿಟ್ಟಿತ್ತು.

ಸಾಮಾನ್ಯವಾಗಿ ನಾವು ಕಂಡಂತೆ **ಮಣ್ಣು** ರೈತರಿಗೆ ಬಿಟ್ಟರೆ, ಬೇರೆಯವರಿಗೆ **ಕೊಳೆ** ಎಂದೇ ಪರಿಚಿತ. ಆದರೆ ಅದೇ ಮಣ್ಣು ಮತ್ತು ಕೊಳೆ ಈ ಭೂಮಿಯ ಆಹಾರದಿಂದ ಆಹಾಕಾರಕ್ಕೆಳೆದೊಯ್ಯುವ ಪ್ರವಾಹದ ವರೆಗೂ ತನ್ನ ಪಾತ್ರವಿದೆ ಎಂದು ನಿರೂಪಿಸಿದೆ. ಆದ್ದರಿಂದಲೇ 2015ರ ವರ್ಷವನ್ನು "ಅಂತರರಾಷ್ಟ್ರೀಯ ಮಣ್ಣಿನ ವರ್ಷ" ಎಂದು ಘೋಷಿಸಲಾಗಿತ್ತು.




ನಾವು ನೋಡುವ ಅದೇ ಮಣ್ಣನ್ನು 20 ಭಾಗಗಳಾಗಿ ವಿಂಗಡಿಸಿದರೆ ಅದರಲ್ಲಿ 9 ಭಾಗಗಳು ನಾವು ಕರೆಯುವ ಕೊಳೆ, ಅವೇ ಮರಳು, ಮಣ್ಣು ಮತ್ತು ಹೂಳು. ಹಾಗೂ 10 ಭಾಗಗಳು ನೀರು ಮತ್ತು ಗಾಳಿಯಾಗಿವೆ ಮತ್ತುಳಿದ ಭಾಗ ಸಾವಯವ ಮಣ್ಣು, ಸತ್ತ ಮತ್ತು ಕೊಳೆತ ಜೀವಿಗಳಿಂದಾದವು. ಅದಲ್ಲದೆ ಎಷ್ಟೋ ಸೂಕ್ಷ್ಮ ಜೀವಿಗಳು (ಹೆಚ್ಚಾಗಿ ಶಿಲೀಂಧ್ರ

ಮತ್ತು ಬ್ಯಾಕ್ಟೀರಿಯ) ಕೂಡ ಮಣ್ಣಿನಲ್ಲಿರುವುದು ನೀಮಗೆ ತಿಳಿದೇ ಇದೆ. ಈ ಲೆಕ್ಕಾಚಾರ ಆರೋಗ್ಯಕರ ಮಣ್ಣಿನದು. ಬೇರೆ ಬೇರೆ ವಾತಾವರಣದ ಅನುಸಾರ ಮಣ್ಣಿನ ಗುಣವೂ ಸಹ ಬೇರೆಯಾಗಿರುತ್ತದೆ. ಉದಾಹರಣೆಗೆ ಬರ ಪೀಡಿತ ಪ್ರದೇಶಗಳಲ್ಲಿ ನೀರಿನ ಅಂಶ ಬಹಳ ಕಡಿಮೆ ಇದ್ದು ಅಲ್ಲಿ ಗಾಳಿಯ ಚಲನೆಗೂ ದಕ್ಕೆಯಾಗುತ್ತದೆ. ಅದಲ್ಲದೆ ಅಲ್ಲಿನ ಸೂಕ್ಷ್ಮಾಣು ಜೀವಿಗಳ ಸಂಖ್ಯೆಯು ಕಡಿಮೆ ಇರುತ್ತದೆ. ಅಷ್ಟೇ ಅಲ್ಲದೆ ಕೆಲ ಕೃಷಿವಿಧಾನಗಳಿಂದಲೂ ಮಣ್ಣಿನ ಗುಣಮಟ್ಟ ಕ್ಷೀಣಿಸುವುದು (ಬೆಳೆಗೆ ಉಪಯೋಗಿಸುವ ರಾಸಾಯನಿಕಗಳ ಪರಿಣಾಮ ಸೂಕ್ಷ್ಮ ಜೀವಿಗಳ ಮೇಲೆ ಒತ್ತಡ ಮತ್ತು ಇನ್ನಿತರ ಪರಿಣಾಮಗಳು). ಮುಖ್ಯವಾಗಿ ಈ ಸೂಕ್ಷ್ಮ ಜೀವಿಗಳ ಪಾತ್ರ ಗಣನೀಯವಾಗಿದೆ, ಹೇಗೆ?



ಈ ಸೂಕ್ಷ್ಮ ಜೀವಿಗಳು ಮಣ್ಣನ್ನು ಚಿಕ್ಕ ಚಿಕ್ಕ ಉಂಡೆಗಳ(agregates) ಮಾಡುತ್ತವೆ. ಇದರಿಂದ ಮಣ್ಣಿನಲ್ಲಿ ನೀರು ಹಾಗೂ ಗಾಳಿ ಸೇರಲು ಜಾಗ ಸಿಗುತ್ತದೆ. ಅಷ್ಟೇ ಅಲ್ಲದೆ ಕೆಲ ಶಿಲೀಂಧ್ರಗಳು ಈ ಮಣ್ಣಿನ ಉಂಡೆಗಳನ್ನು ಹೈಫೆಯ(hyphae) ಮೂಲಕ ಹೊಲೆಯುತ್ತವಂತೆ. ಇದರಿಂದ ಆ ಉಂಡೆಗಳ ನಡುವಿನ ಜಾಗ ಖಾಲಿಯಾಗಿರುತ್ತವೆ ಮತ್ತು ಗಿಡಗಳ ಬೇರುಗಳು ಸುಲಭವಾಗಿ ಮಣ್ಣಿನಲ್ಲಿ ನುಸುಳಬಹುದು. ಈ ಸೂಕ್ಷ್ಮಾಣು ಜೀವಿಗಳು ಹಲವಾರು ಕಾರ್ಯಗಳು ಮಣ್ಣಿನಲ್ಲಿ ಮಾಡುತ್ತವೆ, ಅವುಗಳಲ್ಲಿ ಸತ್ತ ಪ್ರಾಣಿ ಹಾಗೂ ಸಸ್ಯವರ್ಗಗಳ ಕೊಳೆಯುವಿಕೆಯು ಒಂದು. ಇದರಿಂದಾಗಿ ಅವುಗಳಲ್ಲಿನ ಪೋಷಕಾಂಶಗಳು ಮರಳಿ ಭೂಮಿಗೆ ತಲುಪುತ್ತವೆ ಅವುಗಳನ್ನು ಪುನಃ ಸಸ್ಯ ಬೆಳವಣಿಗೆಗೆ ಉಪಯುಕ್ತವಾಗಿವೆ.

ಕೆಲ ಸಸ್ಯಗಳ ಬೇರುಗಳಲ್ಲಿ ಲೆಗ್ಯೂಮ್ಸ್(legumes) ಎಂಬ ಗಂಟುಗಳಿರುತ್ತವೆ. ಇವು ರೈಸೋಬಿಯಾ(rhizobia) ಎಂಬ ಬ್ಯಾಕ್ಟೀರಿಯದ ವಾಸಸ್ಥಾನ. ಈ ಬ್ಯಾಕ್ಟೀರಿಯಗಳು ಗಿಡಗಳಿಗೆ ಬೇಕಾಗುವ ನೈಟ್ರೊಜನ್ ನ್ನು ಅವುಗಳಿಗೆ ಬೇಕಾದ ರೂಪದಲ್ಲಿ(ammonium ರೂಪದಲ್ಲಿ) ಒದಗಿಸುತ್ತವೆ. ಅದರ ಬದಲಾಗಿ ಗಿಡಗಳೂ ಸಹ ಅವುಗಳ ಆಹಾರವಾದ ಇಂಗಾಲವನ್ನು ನೀಡುತ್ತವೆ. ಈ ಸಹಬಾಳ್ವೆಯು ಸಸ್ಯಗಳಿಗೂ ಹಾಗೂ ಆ ಬ್ಯಾಕ್ಟೀರಿಯಗಳಿಗೂ ಉಪಕಾರಿಯಾಗಿದೆ. ಹಾಗೆಯೇ ಕೆಲವು ಶಿಲೀಂಧ್ರಗಳು ಗಿಡದ ಬೇರುಗಳ ಒಳಗೆ ಬೆಳೆಯುತ್ತವೆ. ಅವು ಸಸ್ಯ ಬೆಳವಣಿಗೆಗೆ ಉಪಕಾರಿಯೇ ಆಗಿವೆ, ಹೇಗೆಂದರೆ ಗಿಡದ ಬೇರಿನಲ್ಲಿರುವ ಈ ಶಿಲೀಂಧ್ರಗಳು ಗಿಡಗಳಿಗೆ ಭೂಮಿಯಿಂದ ನೀರು ಮತ್ತು ಪೋಷಕಾಂಶ ಒದಗಿಸುತ್ತವೆ. ಹಾಗೆಯೇ ಬೇರಿನ ಹೊರಗೆ ಮಣ್ಣಿನಲ್ಲಿರುವ ಕೆಲ ಶಿಲೀಂಧ್ರಗಳು ಭೂಮಿಯಿಂದ ರಂಜಕ(phosphorus)ವನ್ನು ಒದಗಿಸುತ್ತವೆಯಂತೆ, ಬದಲಾಗಿ ಸಕ್ಕರೆ ಪಿಷ್ಟವನ್ನು ತೆಗೆದುಕೊಳ್ಳುತ್ತವೆಯಂತೆ. ಇಷ್ಟೇ ಅಂದುಕೊಂಡಿರೇ? ಇಲ್ಲ...ಈ ಸೂಕ್ಷ್ಮಾಣು ಜೀವಿಗಳು ಸಸ್ಯಗಳ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತವೆಯಂತೆ. ಹೇಗೆ?? ಸಸ್ಯಗಳಿಗೆ ಸಹಕಾರಿಯಲ್ಲದ ಕೆಲವು ರೋಗಕಾರಕಗಳು (pathogen) ಅಪಾಯಕಾರಿ. ಇವುಗಳನ್ನು ಇನ್ನುಳಿದ ಸಹಕಾರಿ ಸೂಕ್ಷ್ಮ ಜೀವಿಗಳು ಎರಡು ವಿಧದಲ್ಲಿ ತಡೆಗಟ್ಟುತ್ತವೆ.

ಒಂದು, ಆ ರೋಗಕಾರಕಗಳನ್ನು ಸಸ್ಯಗಳಿಗೆ ಸಹಕಾರಿಯಾದ ಸೂಕ್ಷ್ಮ ಜೀವಿಗಳು ವಿಭಜಿಸಿ ಸಸ್ಯಗಳಿಗೇ ಬೇಕಾದ ಪೋಷಕಾಂಶಗಳನ್ನಾಗಿ ಒದಗಿಸುತ್ತವೆ. ಹಾಗೆಯೇ ಕೆಲವು ತರಹದ ಶಿಲೀಂಧ್ರಗಳು ಬೇರಿನ ಕೋಶ ಗೋಡೆಗಳನ್ನು(cell wall) ಹಿರಿದಾಗಿಸಿ ಆ ರೋಗಕಾರಕಗಳು ಒಳಗೆ ನುಸುಳದಂತೆ ಮಾಡುತ್ತವೆ.

ಸರಿ.. ಇವೆಲ್ಲ ಸಸ್ಯಗಳಿಗೆ ಉಪಯೋಗವೇ. ಇದರಿಂದ ನಮಗೇನು ಲಾಭ??

ಇದರಿಂದ ಪ್ರತ್ಯಕ್ಷವಾಗಿ ನಮಗೂ ಲಾಭವುಂಟು. ಅದು ಹೇಗೆ? ನೋಡಿ, ಮಳೆಗಾಲದ ಮಳೆಯು ಸುರಿದಂತೆ ಈ ಮುಂಚೆ ಹೇಳಿದ ಹಾಗೆ ಮಣ್ಣು ಆರೋಗ್ಯಕರವಾಗಿದ್ದರೆ, ನೀರು ಸರಾಗವಾಗಿ ಹಿಂಗಿ ಹರಿಯುವ ನೀರು ಕಡಿಮೆಯಾಗಿರುತ್ತದೆ. ಹೀಗೆ ನೀರು ಹಿಂಗುವುದರಿಂದ ಅಂತರ್ಜಲದ ಮಟ್ಟವು ಏರುತ್ತದೆ.

ಇದು ನಮಗೂ ಗೊತ್ತು ಅಂತೀರಾ.. ಇರಲಿ ಮುಂದೆ ಓದಿ.



ನಮ್ಮ ಸಿಟಿಯಲ್ಲಿನ ಪಾಡು ನೋಡಿದ್ದೀರಲ್ಲವೇ, ಸುಮಾರಾಗಿ ಮಳೆ ಬಂದರೆ ಸಾಕು ಒಳ ಚರಂಡಿ ಒಡೆದು, 2-3 ದಿನ ಸುಗಂಧ ದ್ರವ್ಯ ಹಾಗೆ ಇರುತ್ತದೆ. ಏಕೆ ಹೀಗೆ? ಎಂದು ಒಮ್ಮೆಯಾದರೂ ಯೋಚಿಸಿದ್ದೀರೇನು? ಬಹಳ ಕಡಿಮೆ ಅಲ್ಲವೇ? ನಮ್ಮ ಬೆಂಗಳೂರಿನಂತಹ ಮಹಾನಗರಗಳು ಹೆಚ್ಚೆಚ್ಚು ರೋಡುಗಳು, ಕಾಂಕ್ರೀಟ್ ಪಾರ್ಕಿಂಗ್ ಗಳು, ಅಪಾರ್ಟ್ಮೆಂಟ್ ಗಳಿಂದಲೇ ತುಂಬಿವೆ. ಹಳ್ಳಿಯಲ್ಲಿನಂತಹ ಮಣ್ಣಿನ ಸುಗಂಧಯುಕ್ತ ಮಣ್ಣು ಸಿಗಲು ಬಹಳವೇ ಹುಡುಕಬೇಕೆಂದೆನಿಸುತ್ತದೆ. ಹೀಗಿರುವಾಗ, ಬಿದ್ದ ಮಳೆ ಬೇರೆ ದಾರಿಗಾಣದೆ ಚರಂಡಿಯ ಹಾದಿ ಹಿಡಿಯುತ್ತದೆ. ಅವೈಜ್ಞಾನಿಕ ರಚನೆಯ ಚರಂಡಿಗಳ ಪರಿಣಾಮ ಅವೂ ಸಹ ತುಂಬಿ ತುಳುಕುತ್ತವೆ. ಈ ತುಂಬಿ ತುಳುಕುವ ಚರಂಡಿಗಳು ದುರ್ವಾಸನೆಯಷ್ಟೇ  ತರದೆ ಹಿಂದೆಂದೂ ಕಂಡು ಕೇಳರಿಯದ ಹೊಸ ಹೊಸ ರೋಗಗಳನ್ನೂ ಹೊತ್ತು ತರುತ್ತವೆ. ಇದು ಸಾಲದು ಎಂಬಂತೆ ಈ ತರಹದ ನಗರಗಳಲ್ಲಿ ಅಥವಾ ಅಕ್ಕ ಪಕ್ಕದಲ್ಲಿ ಎಲ್ಲಾದರೂ ನದಿ ಹರಿಯುತ್ತಿದ್ದರೆ ಪ್ರವಾಹವಂತೂ ಖಂಡಿತ. ಇಂತಹ ಎಷ್ಟೋ ನಿದರ್ಶನಗಳನ್ನು ನಾವು ದೂರದರ್ಶನದಲ್ಲಿ ನೋಡಿದ್ದೇವೆ.

ಹಾಗಾದರೆ ಇದನ್ನು ಸರಿಪಡಿಸುವುದೇಗೆ? ಇಲ್ಲಿಯವರೆಗೆ ನಾವು ಬುದ್ಧಿ ಉಪಯೋಗಿಸಿದ್ದು ಸಮಸ್ಯೆಯ ಹುಡುಕಾಟದಲ್ಲಿಯೇ ಹೆಚ್ಚು. ಅದರ ಬದಲು ಸ್ವಲ್ಪ ಸಮಯ ಹಾಗೂ ಬುದ್ಧಿ, ಪರಿಹಾರದ ಕಡೆಗೆ ಹಚ್ಚಿದರೆ...? ಹೋಗಲಿ ಬಿಡಿ. ಸದ್ಯಕ್ಕೆ ಈ ಸಮಸ್ಯೆಗೆ ಪರಿಹಾರ, ಅಳಿದುಳಿದ ಮಣ್ಣಿರುವ ಪ್ರದೇಶದಲ್ಲಿ  ಎಲ್ಲೆಲ್ಲಿ ಹೆಚ್ಚು ನೀರು ಹಿಂಗಬಹುದೆಂದು ಅಲ್ಲಿಯ ಮಣ್ಣಿನ ಪರೀಕ್ಷೆಯ ಮೂಲಕ ತಿಳಿದುಕೊಳ್ಳಬಹುದು. ಸುಮಾರು 5ಮೀ ಆಳದ ವರೆಗೂ ಮಣ್ಣಿನಲ್ಲಿ ರಂಧ್ರ ಕೊರೆದು ಅಲ್ಲಿನ ಮಣ್ಣನ್ನು ಪರೀಕ್ಷಿಸಬಹುದಾಗಿದೆ. ಅದರಲ್ಲಿ ನಮಗೆ ಸುಮಾರು 10,000 ವರ್ಷಗಳ ಹಿಂದೆ ರಚನೆಯಾದ ಮಣ್ಣು ಸಿಗುತ್ತದೆಯಂತೆ. ಹಾಗೆಯೇ ಆ ಪದರಗಳ ಬಣ್ಣಗಳ ವ್ಯತ್ಯಾಸಗಳ ಆಧಾರದ ಮೇಲೆ ಅಲ್ಲಿನ ಮಣ್ಣಿನ ಗುಣಮಟ್ಟದಂತೆ ಮಳೆನೀರು ಇಂಗು ಗುಂಡಿಗಳನ್ನು ನಿರ್ಮಿಸಬಹುದೇ ಇಲ್ಲವೇ ಎಂಬುದು

ತಿಳಿಯಬಹುದಾಗಿದೆ. ಇದು ಕೇವಲ ನಗರಾಭಿವೃದ್ಧಿ ಪ್ರಾಧಿಕಾರದ ಕೆಲಸವಲ್ಲ. ಆದ್ದರಿಂದ ನಿಮ್ಮ ನಮ್ಮ ಮನೆಯ ಹಿತ್ತಲಲ್ಲಿಯೂ(ಇದ್ದರೆ...!) ಸಹ ಈ ರೀತಿಯ ಇಂಗು ಗುಂಡಿ ಅಥವಾ ಸಸ್ಯತೋಟವನ್ನು ನಿರ್ಮಿಸಬಹುದಾಗಿದೆ. ಎಷ್ಟೇ ಆದರೂ 'ಹನಿ ಹನಿ ಕೂಡಿ ಹಳ್ಳ' ಅಲ್ಲವೇ?



ಸರಿ ಸರಿ! ಇವೆಲ್ಲ ಸುಮಾರಾಗಿ ತಿಳಿದೇ ಇತ್ತು.! ಅಂತೀರಾ... ಹಾಗಾದರೆ ಇದರ ಅನುಸಾರ ಎಷ್ಟರ ಮಟ್ಟಿಗೆ ಕ್ರಮ ಗೆದುಕೊಂಡಿದ್ದೀರಿ ಎಂಬುದು ನೀವೇ ಒಮ್ಮೆ ನೋಡಿ. ಆದರೆ ಮುಂದೆ... ನಿಮಗೆ ಬಹುಶಃ ತಿಳಿಯದ ಕೆಲ ಸಂಗತಿಗಳಿವೆ. ಈ ಮಳೆ ಬಂದ ನಂತರ ನೀರು ಹರಿಯುವುದನ್ನು ತಡೆಯುವುದರಿಂದ ಭೂಮಿಯ ಹವಾಮಾನ ಬದಲಾವಣೆಯನ್ನು ತಡೆಯಬಹುದು.! ಹೇಗೆಂದರೆ ಹರಿಯುವ ನೀರು ಜೈವಿಕ ಮತ್ತು ಅಜೈವಿಕ (organic and inorganic) ಅಂಶಗಳನ್ನು ಕೊಂಡೊಯ್ಯುತ್ತವೆ. ಜೊತೆಗೆ ಮಣ್ಣಿನ ಸವಕಳಿಯೂ ಉಂಟಾಗುತ್ತದೆ ಮತ್ತು ಭೂಮಿಯ ಮಣ್ಣಿನಲ್ಲಿ ಸಸ್ಯವರ್ಗ ಬೆಳೆಯುವ ಪೌಷ್ಟಿಕತೆಯ ಗುಣಮಟ್ಟವು ಕ್ಷೀಣಿಸುತ್ತದೆ. ಇದರಿಂದಾಗಿ ಭೂ ವಾತಾವರಣವು ಬದಲಾಗುತ್ತದೆ. ಭೂಮಿಯ ಮೇಲ್ಮೈ ಮಣ್ಣು ಹರಿವ ನೀರಿಗೆ ಸುಲಭವಾಗಿ ಸಿಕ್ಕಿ ಜೊತೆಗೆ ಕೊಂಡೊಯ್ಯುತ್ತದೆ. ಇದಕ್ಕೆ ಕಾರಣ ಅಲ್ಲಿ ಹೆಚ್ಚಾಗಿರುವ  ಜೈವಿಕ ತುಣುಕುಗಳು ನೀರಿನಲ್ಲಿ ತೇಲುವುದರಿಂದ. ಈ ಜೈವಿಕ ಅಂಶ ಹಾಗೂ ಸೂಕ್ಷ್ಮ ಜೀವಿ ರಹಿತ ಮಣ್ಣು ಸಸ್ಯವರ್ಗ ಬೆಳೆಯಲು ಸೂಕ್ತವಲ್ಲ. ಆರೋಗ್ಯಕರ ಸಸ್ಯಗಳು ವಾತಾವರಣದಲ್ಲಿನ ಕಾರ್ಬನ್ ಡೈ ಆಕ್ಸೈಡ್ ಉಪಯೋಗಿಸಿ ಆಹಾರ ತಯಾರಿಸುತ್ತವೆಂದು ತಿಳಿದಿದೆ. ಇದರಿಂದ ಜಾಗತಿಕ ತಾಪಮಾನಕ್ಕೆ ಮೂಲ ಕಾರಣವಾಗಿರುವ ಕಾರ್ಬನ್ ನ ಪ್ರಮಾಣ ವಾತಾವರಣದಲ್ಲಿ ಕಡಿಮೆಯಾಗುತ್ತದೆ.

ಈ ಮುಂಚೆಯೇ ಹೇಳಿದ ಹಾಗೆ ಸಸ್ಯವರ್ಗ ಆಹಾರ ತಯಾರಿಸಲು ವಾತಾವರಣದ $CO_2$ ಉಪಯೋಗಿಸುವುದರಿಂದ, ವಾತಾವರಣದ ಇಂಗಾಲ ಇವುಗಳ ಜೀವಕೋಶಗಳಲ್ಲಿ ಸೇರುತ್ತವೆ. ಒಂದು ವೇಳೆ ಅವು ಸತ್ತರೂ, ಮಣ್ಣಿನಲ್ಲಿಯೇ ಜೈವಿಕ ತುಣುಕಾಗಿ ಸಂಗ್ರಹಿಸಲ್ಪಡುತ್ತವೆ. ಹಾಗಾಗಿ ಈ ಮಣ್ಣು ಎಷ್ಟೋ ಪ್ರಮಾಣದಲ್ಲಿ ಕಾರ್ಬನ್ ತೊಟ್ಟಿಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ಮಹತ್ತರ

ಕೆಲಸ ಮಾಡುತ್ತಿದ್ದ ಮಣ್ಣಿನ ಆರೋಗ್ಯ ಕೆಡಿಸಿದ ಹೆಗ್ಗಳಿಕೆ ಮನುಕುಲಕ್ಕೆ ಸೇರುತ್ತದೆ. ಇದರ ಪರಿಣಾಮ ನಾವು ಈಗಾಗಲೇ ಹೆಚ್ಚುತ್ತಿರುವ ಜಾಗತಿಕ ತಾಪಮಾನವೇ ಸಾಕ್ಷಿ. ಈ ರೀತಿ ಹೆಚ್ಚುತ್ತಿರುವ ತಾಪಮಾನದಿಂದ  ಮಣ್ಣಿನಲ್ಲಿರುವ ಬಾಕ್ಟೀರಿಯಾಗಳು ಹೆಚ್ಚೆಚ್ಚು ಬೆಳೆದು ಸತ್ತ ಸಸ್ಯ ಹಾಗೂ ಪ್ರಾಣಿಗಳನ್ನು ಹೆಚ್ಚೆಚ್ಚು ವಿಭಜಿಸಿ ಇಂಗಾಲವನ್ನು ಇನ್ನೂ ಹೆಚ್ಚು ಪ್ರಮಾಣದಲ್ಲಿ ಹಾಗೂ ಕಡಿಮೆ ಸಮಯದಲ್ಲಿ ಮಾಡುತ್ತಿವೆ. ಇದರಿಂದಾಗುವ ಪರಿಣಾಮ ಮತ್ತೆ ವಿವರಿಸಬೇಕಿಲ್ಲ ಎಂದೆನಿಸುತ್ತದೆ. ಕರಗುತ್ತಿರುವ ಧ್ರುವದ ಹಿಮಗಡ್ಡೆಯಿಂದ ಸಮುದ್ರಮಟ್ಟ ಹೆಚ್ಚುತ್ತಿದೆ ಎಂಬುದು ತಿಳಿದ ವಿಚಾರ, ಆದರೆ ಇದರಲ್ಲೂ ನಮಗೆ ತಿಳಿಯದ ವಿಶೇಷತೆ ಇದೆ. ಈ ಕರಗಿದ ಮಂಜುಗಡ್ಡೆಯ ಕೆಳಗೆ ಇರುವ ಸಾವಿರಾರು ವರ್ಷಗಳಿಂದ ಸೂರ್ಯನ ಶಾಖವೇ ತಟ್ಟದ ಪ್ರದೇಶಲ್ಲಿಯೂ ಈಗ ಸೂರ್ಯ ತಲುಪಿದ ಪರಿಣಾಮ, ಅಲ್ಲಿನ ಇಂಗಾಲ ಸಹ ಪುನಃ ವಾತಾವರಣಕ್ಕೆ ಸೇರ್ಪಡೆಯಾಗುತ್ತಿದೆ. ಇದರಿಂದಾಗಿ ಆಗುವ ಅನಾನುಕೂಲಗಳು ಏನೆಂಬುದು ಇಷ್ಟೊತ್ತಿಗೆ ನಿಮಗೇ ಅರಿವಾಗಿರುತ್ತದೆ.

ಆರೋಗ್ಯ ಮಣ್ಣಿನಿಂದ ಸಸ್ಯವರ್ಗ ಬೆಳೆಯಲು ಅನುಕೂಲ, ಆರೋಗ್ಯ ಸಸ್ಯವರ್ಗದಿಂದ ಉತ್ತಮ ವಾತಾವರಣ ಸಾಧ್ಯ, ಈ ಉತ್ತಮ ವಾತಾವರಣ ಹಾಗೂ ಸಹ ಜೀವ ವೈವಿಧ್ಯದ ಕರುಣೆಯಿಂದಲೇ ನಮ್ಮ ಬಾಳ್ವೆ ಇನ್ನೂ ಕೆಲ ಕಾಲ ಸಹಜ ಹಾಗೂ ಸುಗಮ. ಹಾಗಾಗಿ ನಾವು ಸ್ವಲ್ಪ ಬಿಡುವು ಮಾಡಿಕೊಂಡು "ಮಾನವ ಕೇಂದ್ರಿತ" ಅಭಿವೃದ್ಧಿ ಪಕ್ಕಕ್ಕಿಟ್ಟು, ನಾವು ನಡೆದು ಬಂದ ಹಾದಿ ಮತ್ತು ಮುಂದಿನ ದೂರಾಲೋಚನೆಯ(ಹೆಚ್ಚಾಗಿ ದುರಾಲೋಚನೆ) ಸರಿಪಡಿಸಿಕೊಳ್ಳುವುದು ಉತ್ತಮ ಅನಿಸುತ್ತದೆ.



**- ಜೈಕುಮಾರ್ .ಆರ್**

## ಅಂತರಿಕ್ಷಕೆ

ಅಂತರಿಕ್ಷಕಿಂದು ಹಾರಾಟ
ಸಂಶೋಧನೆ ಅನ್ವಷಣೆಯ
ಸಂಕಲ್ಪದೊಂದಿಗೆ?

ಸಂವಾಹನ ದೂರ ಸಂಪರ್ಕ ಸಾಧನೆಗೆ
ಉಪಗ್ರಹ, ಬಾಹ್ಯಕಾಶ ದೂರ ದಶಕಗಳ ನಿಲ್ದಾಣಕೆ
ಬಾಹ್ಯ ನೆಲೆಯ ಸಾಧ್ಯ ಅಸಾಧ್ಯತೆಗಳಿಗೆ
ನೈಸರ್ಗಿಕ ಸಂಪನ್ಮೂಲಗಳ ತರುವಲ್ಲಿಗೆ
ಅನ್ಯಗ್ರಹ ಜೀವಿಯ ಬಾಂಧವ್ಯ ನಿರ್ಮಾಣಕೆ

ನಿರ್ವಾತ ಅಜ್ಞಾತ ಲೋಕಕೆ
ಹಗಲು ರಾತ್ರಿಗಳಾಗದ ನಾಡಿಗೆ
ಗುರುತ್ವವಿಲ್ಲ ದೂರಿಗೆ
ವಿಷ ಅನಿಲಗಳ ಹಿಮಪಾತಕೆ
ಜಲವಿರದ ಸೃಷ್ಠಿ ಇರದ ಪಾಳು

ಅಕಾಶಕಾಯಗಳ ಅನ್ವೇಷಣೆಗೆ
ಗುರುತ್ವದ ಅಸಾಮಾನ್ಯ ಸಾಧ್ಯತೆಗೆ
ಜ್ಯೊತಿರ್ ವರ್ಷಗಳಾಚೆಗೆ
ನಿಹಾರಿಕೆ ಧೂಮಕೇತುಗಳ ರಚನೆಗೆ
ಕಪ್ಪು ರಂಧ್ರ, ನಕ್ಷತ್ರ ಪುಂಜಗಳಿಗೆ

ಹೊಸ ಸಿದ್ಧಾಂತಗಳ ಅನುಸರಣೆಗೆ
ಕಾಲಮಾನ ಋತುಮಾನ ವೈವಿಧ್ಯಕೆ
ಜೀವ ಸಂಕುಲದ ಅಧ್ಯಯನ ಪಲಾಯನಕೆ
ಅಂತರಿಕ್ಷದಲಿ ವಿಹರಿಸುವ ಪ್ರವಾಸಕ್ಕೆ
ಅನಂತ ಅನಂತ ಪ್ರಶ್ನೆಗಳುತ್ತರಕೆ...!



- ಕೃಷ್ಣನಾಯಕ್

# ಪ್ರಕೃತಿ ಬಿಂಬ




© ಕಾರ್ತೀಕ್ .ಎ .ಕೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ

ಈ ದಟ್ಟ ಕಾಡಲ್ಲಿ ನಿಂತ ದಿಟ್ಟ, ನೆಟ್ಟ-ಸೊಟ್ಟ ಮರಗಳ ಬೆಳವಣಿಗೆಯಲ್ಲಿ ತುಂಬುವುದೇನು ಈ ಹಳ್ಳ-ಕೊಳ್ಳವೆಂಬ ಬೆರಗಿನಲಿ, ಹೀರಿದ ನೀರು ಸೊಟ್ಟ ಸೊಂಡಿಲಿನಿಂದೆಕ್ಕಿ ಬಾಯಿಯ ಬಾವಿಗೆ ಇಳಿಯುವಲ್ಲಿ, ತಂಪಿನ ಇಂಪು ಸೊಂಪಾಗಿ ಸುಳಿದೊಡೆ ಅಲುಗಾಡಿಸತೊಡಗಿದ ಸಣ್ಣ ಬಾಲವ, ಆಳವನರಿಯದೆ ಕೆರೆಯ ಮಧ್ಯ ನಿಂತ ಘನ ಗಾತ್ರದ ಗಜರಾಜನು...!



© ಕಾರ್ತಿಕ್ .ಎ .ಕೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ

ಒಮ್ಮೊಮ್ಮೆ ಈ ಬಣ್ಣದ ತಾರೆಗಳು ನೂರು ಆನಂದಗಳನ್ನು ನೀಡುತ್ತವೆ. ಅವನತಿಯ ಹಾದಿಯಲ್ಲಿರುವ ಪ್ರಭೇದಗಳು ಮತ್ತೆ ತಮ್ಮ ಸಂಕುಲವನ್ನು ವೃದ್ಧಿಗೊಳಿಸಲು, ಪ್ರಕೃತಿಯಲ್ಲಿನ ಸಮತೋಲವನ್ನು ಸಾಧಿಸಲು ಸದಾ ಪ್ರಯತ್ನಿಸುತ್ತವೆ. ಇಲ್ಲಿ ಮನುಷ್ಯನಾದ ನಮ್ಮ ಪಾತ್ರವೂ ಕೂಡ ಬಹಳ ಮುಖ್ಯ....!



© ಕಾರ್ತಿಕ್ .ಎ .ಕೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ

ನಮಗೂ ಒಂದಿಷ್ಟು ಮೀನಿಗಾಗಿ ನೀರಿನ ಸೆಲೆ ಬೇಕು...!, ಗೂಡಿಗಾಗಿ ಒಂದಿಷ್ಟು ಮರಗಳು ಬೇಕು...!, ಎತ್ತರಕ್ಕೆ ಹಾರಡಲು, ಆಟವಾಡಲು ಒಂದಿಷ್ಟು ಜಾಗವೂ ಬೇಕು...! ಈ ಭೂಮಿ, ಈ ಜಲ, ಈ ಕಾಡು ಎಲ್ಲವೂ ನಮಗೂ ಉಳಿಸಿ...!




© ಕಾರ್ತಿಕ್ .ಎ .ಕೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ

ಪಶ್ಚಿಮಘಟ್ಟಗಳ ಈ ದಟ್ಟ ಕಾಡುಗಳು ನಮಗೆ ಮನೆ, ನಿಮಗೂ ಕೂಡ ಮನೆಯೇ, ನಮ್ಮ ಮನೆಯನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯವೂ ಕೂಡ...